ಕುಂದಾಪುರದಲ್ಲಿ ನೂತನವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವ ಕುರಿತು

564 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ನೂತನವಾಗಿ ರಚಿಸುವ ಯೋಜನೆ ಸರಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಬಸ್ ನಿಲ್ದಾಣದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಹಾಗೂ ನಕ್ಷೆಯ ತಯಾರಿಕೆ ಮಾಡಲಾಗಿದೆಯೇ?

ಇ) ಮಾಡಿದ್ದಲ್ಲಿ ಮೇಲಿನ ಕಾರ್ಯವನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಹೌದು

ಆ) ಭೂಸ್ವಾಧೀನತೆಯ ಕಾರ್ಯವು ಇನ್ನೂ ಪ್ರಗತಿಯಲ್ಲಿರುತ್ತದೆ. ನಿವೇಶನವು ಸ್ವಾಧೀನಕ್ಕೊಳಪಟ್ಟ ಮೇಲೆ ನಕ್ಷೆ ಮತ್ತು ವೆಚ್ಚದ ವಿವರಗಳನ್ನು ತಯಾರು ಮಾಡಲಾಗುವುದು.

ಇ) ಉದ್ಭವಿಸುವುದಿಲ್ಲ.

ವೇತನ ವಿವಿಧ ಬಡ್ತಿಗೆ ಖರ್ಚಾಗುವ ಹಣ ಹಾಗೂ ನೌಕರರ ಸಂಖ್ಯೆ

60-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾಗಿರುವ ವಿವಿಧ ಶ್ರೇಣಿಯ ನೌಕರರ ಸಂಖ್ಯೆ ಎಷ್ಟು? ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ ಎಷ್ಟು?

ಆ) 1992-93, 1993-94 ರಲ್ಲಿ ಎಲ್ಲಾ ವರ್ಗದಸರ್ಕಾರಿ ಅಧಿಕಾರಿ ಹಾಗೂ ನೌಕರರಿಗೆ ಕೊಟ್ಟ ವೇತನ ಭತ್ಯೆ, ಇವರ ಬಡ್ತಿಯ ಮೊತ್ತವೆಷ್ಟು ಹಾಗೂ ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ ಭತ್ಯೆ ಎಷ್ಟು

ಇ) 1994-95ರಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ವೇತನ ಹಾಗೂ ವಿವಿಧ ಭತ್ಯೆ ಎಷ್ಟು?

ಈ) 4ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತಂದಿದೆಯೇ? ತಂದಿದ್ದಲ್ಲಿ ಇದರಿಂದಾಗುವ ಹಣಕಾಸು ಭಾರವೆಷ್ಟು? ಜಾರಿಯಲ್ಲಿ ತರದಿದ್ದ ಪಕ್ಷದಲ್ಲಿ ಇನ್ನೂ ಏಕೆ ತಂದಿಲ್ಲ ಹಾಗೂ ಎಂದು ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ (ಜಿಲ್ಲಾ ಪಂಚಾಯತ್‌ಗಳು ಸೇರಿದಂತೆ) ಮಂಜೂರಾದ ವಿವಿಧ ಶ್ರೇಣಿಯ ಹುದ್ದೆಗಳ ಸಂಖ್ಯೆ 612638ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ 84022.

ಆ) ಎಲ್ಲಾ ವರ್ಗದ ಸರ್ಕಾರಿ ಅಧಿಕಾರಿ: ನೌಕರರಿಗೆ ಕೊಟ್ಟ ವೇತನ ಭತ್ಯೆಯ ಮೊತ್ತ.

1992-93	170765.25 ಲಕ್ಷ ರೂ.ಗಳು
1993-94	202261.63 ಲಕ್ಷ ರೂ.ಗಳು

ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ, ಭತ್ಯೆ

1992-93 34850.17 ಲಕ್ಷ ರೂ.ಗಳು
1993-94 41000.00 ಲಕ್ಷ ರೂ.ಗಳು

ಇ) 241555.65 ಲಕ್ಷ ರೂಪಾಯಿಗಳು

ಈ) 4ನೇ ರಾಜ್ಯವೇತನ ಆಯೋಗದ ಶಿಫಾರಸ್ಸುಗಳನ್ನಾಧರಿಸಿ ರಾಜ್ಯಸರ್ಕಾರವು ದಿನಾಂಕ: 1-7-1993ರಿಂದ ಜಾರಿಗೆ ಬರುವಂತೆ ತತ್ಸಮಾನ ಸಂವಾದಿ ಪರಿಷ್ಕೃತ ವೇತನ ಶ್ರೇಣಿಗಳನ್ನು ನೀಡಿ ವೇತನ ಶ್ರೇಣಿಗಳನ್ನು ಪರಿಷ್ಕರಿಸಿದೆ. ಇದರಿಂದಾಗಿ (ಮಧ್ಯಂತರ ಪರಿಹಾರ ಸೇರಿದಂತೆ) ಸರ್ಕಾರಕ್ಕೆ ರೂ. 178.69 ಕೋಟಿ, ವರ್ಷಕ್ಕೆ ವೆಚ್ಚ ತಗಲುತ್ತದೆ. ಆ ಆಯೋಗದ ಶಿಫಾರಸ್ಸುಗಳ ಉಳಿದ ಅಂಶಗಳನ್ನು ಪರಿಶೀಲಿಸಲು ಹಾಗೂ ಸರ್ಕಾರಕ್ಕೆ ವರದಿ ನೀಡಲು ಪದೀಯ ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯು ಈ ನಿಮಿತ್ತ ಕಾರ್ಯೋನ್ಮುಖವಾಗಿದೆ.

ಹೊಸ ಪೋಲೀಸ್ ಠಾಣೆಗಳ ಪ್ರಾರಂಭ

356(ಎ) - 188 ಶ್ರೀ ಜಿ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಪೊಲೀಸ್ ಠಾಣೆ ಆರಂಭಿಸಲು ಸರ್ಕಾರಕ್ಕೆ ಏನಾದರೂ ನೀತಿ, ಮಾರ್ಗದರ್ಶಿಗಳು ಹಾಗೂ ಆದ್ಯತೆಗಳಿವೆಯೇ?

ಆ) ಹಾಗಿದ್ದಲ್ಲಿ ಅವುಗಳನ್ನು ಅನುಸರಿಸಲಾಗುತ್ತಿದೆಯೇ?

ಇ) ಅಗತ್ಯತೆಯ ಆಧಾರದ ಮೇರೆಗೆ ಮಾಡಬಹುದಾಗಿದ್ದ ಕೆಲಸಗಳನ್ನು ರಾಜಕೀಯ ಒತ್ತಡಗಳಿಗೆ ಮಾಡಲಾಗುತ್ತಿದೆಯೇ?

ಈ) ಇಲ್ಲವಾದಲ್ಲಿ ಕಳೆದ ವರ್ಷ ಆರಂಭಿಸಿದ ಪೊಲೀಸ್ ಠಾಣೆಗಳಲ್ಲಿ ಎಷ್ಟು ತೀರಾ ಅವಶ್ಯಕವಾಗಿದ್ದವು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಒಂದು ಪ್ರದೇಶದ ಜನಸಂಖ್ಯೆ, ವ್ಯಾಪ್ತಿ ವರದಿಯಾಗುತ್ತಿರುವ ಅಪರಾಧಗಳ ಪ್ರಮಾಣ ಮತ್ತು ಕಾನೂನು ಸುವ್ಯವಸ್ಥೆ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಬಿಸಲಾಗುವುದು.

ಆ) ಹೌದು

ಇ) ಇಲ್ಲ

ಈ) ಮಂಜೂರಾದ ಎಲ್ಲ ಪೊಲೀಸ್ ಠಾಣೆಗಳು ಅವಶ್ಯಕವಾದವುಗಳು

ಶಿಗ್ಗಾಂವದಲ್ಲಿ ಸ್ಟೇಡಿಯಂ ಮಂಜೂರಾತಿ

622 - ಶ್ರೀ ಮೆಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ತಾಲ್ಲೂಕು ಸ್ಟೇಡಿಯಂ ಪ್ರಾರಂಭಿಸಲಾಗಿದೆ?

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಸ್ಟೇಡಿಯಂ ತೆಗೆದುಕೊಳ್ಳಲಾಗಿದೆ?

ಇ) ಶಿಗ್ಗಾಂವಿನಲ್ಲಿ ಎಷ್ಟು ಎಕರೆ ಜಮೀನು ಯುವಜನ ಇಲಾಖೆಗೆ ಹಸ್ತಾಂತರಿಸಲಾಗಿದೆ?

ಈ) ಶಿಗ್ಗಾಂವ ತಾಲ್ಲೂಕು ಸ್ಟೇಡಿಯಂ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತು ಕೀಡಾ ಸಚಿವರು) :